ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
NAAC Accredited with "A" Grade 2022
"UNIVERSITY WITH POTENTIAL FOR EXCELLENCE"
ಸಾಮಾನ್ಯ ಆಡಳಿತ ವಿಭಾಗ
G.A.D.

"A" Grade
NAAC Accredited 2008
"Diamond Jubilee Year 1949-2009"
"ವಜ್ರ ಮಹೋತ್ಸವ ವರ್ಷ 1949–2009"
E-mail:kudgad@gmail.com
gad@kud.ac.in

Azadi Ka Amrit Mahotsav
ಪಾವಟೆನಗರ, ಧಾರವಾಡ.
Pavate Nagar, Dharwad.
ದೂರವಾಣಿ ಸಂ.0836-2215358
Tel Ph. No.0836-2215358
Website : www.kud.ac.in

ನಂ.ಕವಿವಿ/ಜಿಎಡಿ/2023–24/154. ದಿನಾಂಕ: 14 MAR 2024

## ಸುತ್ತೋಲೆ

ವಿಷಯ : ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ **"ರಾಷ್ಟ್ರೀಯ ಸಮ್ಮೇಳನ ಹಾಗೂ ಉದ್ಯೋಗ ಮೇಳ"**ವನ್ನು ಆಯೋಜಿಸಿದ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಆದೇಶ ದಿನಾಂಕ: 14.03.2024.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಸ್ನಾತಕ/ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು, ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ, ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ, ಹೊರಗುತ್ತಿಗೆ ನೌಕರರಿಗೆ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮಹಿಳಾ ಸಂಶೋಧನಾ ಅಧ್ಯಯನ ಕೇಂದ್ರ ಹಾಗೂ ಮಹಿಳಾ ಅಧ್ಯಯನ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ **ದಿನಾಂಕ:15.03.2024 ಹಾಗೂ 16.03.2024 ಗಳಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಸಮ್ಮೇಳನವನ್ನು** ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಕಟ್ಟಡದಲ್ಲಿ ಬೆಳಗ್ಗೆ 10.00 ಗಂಟೆಗೆ ಉದ್ಘಾಟನೆಯನ್ನು ನೆರವೇರಿಸಲಾಗುತ್ತದೆ ಹಾಗೂ **ದಿನಾಂಕ: 17.03.2024 ರಂದು ಬೆಳಗ್ಗೆ 9.00 ಗಂಟೆಯಿಂದ ಉದ್ಯೋಗ ಮೇಳವನ್ನು** ವಿಶ್ವವಿದ್ಯಾಲಯದ ಉದ್ಯೋಗ, ಮಾಹಿತಿ ಮಾರ್ಗದರ್ಶನ ಕೇಂದ್ರ (UEIGB) ಇವರ ಮೂಲಕ **ಸಿನೆಟ್ ಸಭಾಭವನದಲ್ಲಿ** ಆಯೋಜಿಸಲಾಗಿದೆ.

ಮುಂದುವರೆದು, **ದಿನಾಂಕ:15.03.2024 ಹಾಗೂ 16.03.2024 ಗಳಂದು** ನಡೆಯುವ ರಾಷ್ಟ್ರೀಯ **ಸಮ್ಮೇಳನಕ್ಕೆ ಮುಖ್ಯ ಭಾಷಣಕಾರರಾಗಿ ಚಂದ್ರಯಾನ–3 ಹಾಗೂ ಆದಿತ್ಯ L–1 ಉಡಾವಣೆಯಲ್ಲಿ ಭಾಗಿಯಾದ ಡಾ. ಕಲ್ಪನಾ ಅರವಿಂದ, ಸಹ ನಿರ್ದೇಶಕರು, LEOS-ISRO, ಬೆಂಗಳೂರು ಇವರು ಆಗಮಿಸಲಿದ್ದು ಸಮಾರಂಭದ ಉದ್ಘಾಟನೆಯನ್ನು ಶ್ರೀಮತಿ. ಕೆ.ಜಿ ಶಾಂತಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ,** ಧಾರವಾಡ ಮತ್ತು ಮುಖ್ಯ **ಅತಿಥಿಗಳಾಗಿ ಶ್ರೀಮತಿ. ದಿವ್ಯಪ್ರಭು, ಜಿ.ಆರ್.ಜೆ., ಭಾ.ಆ.ಸೇ. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ** ಅಲ್ಲದೇ ಅನೇಕ ಗಣ್ಯ ಅತಿಥಿಗಳು ಸಮಾರಂಭದಲ್ಲಿ ಭಾಗವಹಿಸಲಿರುವರು.

ಕಾರಣ, ಸದರ ಕಾರ್ಯಕ್ರಮಕ್ಕೆ ಸ್ನಾತಕ/ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು, ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಮತ್ತು ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ, ಹೊರಗುತ್ತಿಗೆ ನೌಕರರಿಗೆ ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕಡ್ಡಾಯವಾಗಿ ಹಾಜರಿರುವಂತೆ ಈ ಮೂಲಕ ತಿಳಿಸಲಾಗಿದೆ.

A. Channappa
**ಕುಲಸಚಿವರು**

**ಗೆ,**

1. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ, ಧಾರವಾಡ.
2. ಹಣಕಾಸು ಅಧಿಕಾರಿಗಳು, ಕ.ವಿ.ವಿ., ಧಾರವಾಡ.
3. ಸಿಂಡಿಕೇಟ್ ಸದಸ್ಯರು, ಕವಿವಿ ಧಾರವಾಡ.
4. ವಿದ್ಯಾವಿಷಯಕ ಪರಿಷತ್ ಸದಸ್ಯರು, ಕವಿವಿ ಧಾರವಾಡ.
5. ಉದ್ಯಾನಾಧಿಕಾರಿಗಳು, ಉದ್ಯಾನ ಇಲಾಖೆ, ಕವಿವಿ ಧಾರವಾಡ.
6. ಗ್ರಂಥಪಾಲಕರು, ಪ್ರೊ. ಶಿ. ಶಿ. ಬಸವನಾಳ ಗ್ರಂಥಾಲಯ, ಕ.ವಿ.ವಿ, ಧಾರವಾಡ.
7. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕವಿವಿ ಧಾರವಾಡ.
8. ಸಂಯೋಜಕರು, ಎನ್.ಎಸ್.ಎಸ್. ಘಟಕ, ಕವಿವಿ ಧಾರವಾಡ.

(ಮು.ತಿ.ನೋ)

9. ಆಡಳಿತಾಧಿಕಾರಿಗಳು, ಕವಿವಿ ಸ್ನಾತಕೋತ್ತರ ಕೇಂದ್ರಗಳು, ಗದಗ ಹಾಗೂ ಕಾರವಾರ
10. ಎಲ್ಲ ಸ್ನಾತಕೋತ್ತರ ಹಾಗೂ ಆಡಳಿತ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ, ಧಾರವಾಡ.
11. ಎಲ್ಲ ನಿರ್ದೇಶಕರು/ಸಂಯೋಜಕರು/ನೋಡಲ್ ಅಧಿಕಾರಿಗಳು, ಕ.ವಿ.ವಿ, ಧಾರವಾಡ.
12. ಎಲ್ಲ ಪ್ರಾಚಾರ್ಯರು, ಕ.ವಿ.ವಿ, ಘಟಕ ಮಹಾವಿದ್ಯಾಲಯಗಳು/ಪಿ.ಯು. ಕಾಲೇಜು ಹಾಗೂ ಮಾಧ್ಯಮಿಕ ಶಾಲೆ, ಧಾರವಾಡ.
13. ಎಲ್ಲ ಉಪಕುಲಸಚಿವರು, ಕ.ವಿ.ವಿ, ಧಾರವಾಡ.
14. ಸ್ಥಾನಿಕ ಅಭಿಯಂತರರು, ಕ.ವಿ.ವಿ, ಧಾರವಾಡ. ಸದರ ದಿನದಂದು ಸುವರ್ಣ ಮಹೋತ್ಸವ ಸಭಾಭವನದಲ್ಲಿ ವಿದ್ಯುತ್/ಇತರೆ ಅವಶ್ಯಕ ಸೇವೆಗಳನ್ನು ಒದಗಿಸಲು ಈ ಮೂಲಕ ಕೋರಲಾಗಿದೆ.
15. ಎಲ್ಲ ವಸತಿ ನಿಲಯಗಳ ನಿಲಯಪಾಲಕರು, ಕ.ವಿ.ವಿ, ಧಾರವಾಡ.
16. ಮುಖ್ಯೋಪಾಧ್ಯಾಯರು, ಕ.ವಿ.ವಿ, ಪ್ರಾಥಮಿಕ ಶಾಲೆ ಕ.ವಿ.ವಿ, ಆವರಣ ಧಾರವಾಡ.
17. ನಿರ್ದೇಶಕರು, ಮಹಿಳಾ ಸಂಶೋಧನಾ ಅಧ್ಯಯನ ಕೇಂದ್ರ ಹಾಗೂ ಮಹಿಳಾ ಅಧ್ಯಯನ ವಿಭಾಗ, ಕವಿವಿ ಧಾರವಾಡ.

**ಪ್ರತಿ ಮಾಹಿತಿಗಾಗಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ, ಧಾರವಾಡ.
2. ಕುಲಸಚಿವರ ಆಪ್ತ ಸಹಾಯಕರು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ, ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ.
4. ಹಣಕಾಸು ಅಧಿಕಾರಿಗಳ, ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.